
ಚಿತ್ರಕಥಾಪಟ

# ತಿಮ್ಮ

೧


ರಚನೆ: ದೇವುಡು ನರಸಿಂಹಶಾಸ್ತ್ರಿ

ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ

**ಶಿಕ್ಷಕರಲ್ಲಿ ನಿವೇದನೆ:**
ಈ ವಿಶಿಷ್ಟ ಚಿತ್ರಕಥಾಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಒಮ್ಮೆ ಓದಿ ಹೇಳಿ. ಹೇಳುತ್ತಲೇ ಕಥೆ ಆಧರಿಸಿ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre


ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors



ಒಂದು ಮಾವಿನ ತೋಪು. ಆ ತೋಪಿನಲ್ಲಿ ಒಂದು ಹಿಂಡು ಕಪಿಗಳು ಇದ್ದವು.
ಅವು ತಮ್ಮ ಮರಿಗಳನ್ನೆಲ್ಲಾ ಕಟ್ಟಿಕೊಂಡು ದಿನವೂ ತಿಂಡಿಗಾಗಿ ಬೀದಿ ಬೀದಿ ಅಲೆಯುತ್ತಿದ್ದವು.
ತಂದೆತಾಯಿ ಕಪಿಗಳು, ಮರಿಗಳನ್ನು ಕರೆದು,“ಜೋಕೆ! ಹಿಂಡು ಬಿಟ್ಟು ಹೋದೀರಿ!” ಎಂದು
ಆಗಾಗ ಹೇಳುತ್ತಿದ್ದವು.



ಆ ಹಿಂಡಿನಲ್ಲಿ ತಿಮ್ಮ ಎಂಬ ಮರಿ,
ಒಂದು ದಿನ,“ಯಾವಾಗಲೂ ಇವರ
ಜೊತೆಯಲ್ಲಿಯೇ ಏಕೆ ಹೋಗಬೇಕು?
ಇಂದು ನಾನು ಬೇರೇಯೇ ಹೋಗುತ್ತೇನೆ.”
ಎಂದುಕೊಂಡಿತು.



ಅದು ಹಾಗೆಯೇ, ಅವರೆಲ್ಲರೂ ಹೋಗುತ್ತಿದ್ದ ದಾರಿಯನ್ನು ಬಿಟ್ಟು, ಮತ್ತೊಂದು ಹಾದಿಯನ್ನು ಹಿಡಿಯಿತು. ಎಂದಿನಂತೆ ಮರಿಗಳೆಲ್ಲ ಜೊತೆಯಲ್ಲಿ ಬರುತ್ತಿವೆ ಎಂದು ದೊಡ್ಡ ಕಪಿಗಳೂ ಮುಂದು ಮುಂದಕ್ಕೆ ಹೋದವು. ತಿಮ್ಮ ಹಿಂದೆ ಉಳಿದಿದ್ದು ಯಾರಿಗೂ ತಿಳಿಯಲಿಲ್ಲ.

ತಿಮ್ಮ ಕೊಂಚದೂರ
ಹೋಗುವುದರೊಳಗಾಗಿ,
ಒಂದು ನಾಯಿ ಬಂತು; ತಿಮ್ಮನನ್ನು
ಕಂಡು ಬೊಗಳಿತು.





ಅದನ್ನು ಕಂಡು ತುಂಟ ಹುಡುಗರು ಬಂದರು. ತಿಮ್ಮನನ್ನು ಬೇಕಾದಷ್ಟು ಕೀಟಲೆ ಮಾಡಿದರು. ಕೆಲವರು ಮುಖವನ್ನು ಉದ್ದಮಾಡಿ,"ಗುರ್‌ಗುರ್." ಎಂದು ಅಣಕಿಸಿದರು. ಮತ್ತೆ ಕೆಲವರು ಕೈಚಪ್ಪಾಳೆತಟ್ಟಿ,"ಕೋತಿ ತಿಮ್ಮಾ! ಲೇ! ಕೋತಿ ತಿಮ್ಮಾ!" ಎಂದು ರೇಗಿಸಿದರು. ಇನ್ನು ಕೆಲವರು ಕಲ್ಲಿನಿಂದ ಹೊಡೆದರು.

ಇದನೆಲ್ಲಾ ಕಂಡು ತಿಮ್ಮನಿಗೆ ಬಲು ದಿಗಿಲಾಯಿತು. ಅರಚಿಕೊಂಡಿತು; ಅಲ್ಲಿಂದ ತಪ್ಪಿಸಿಕೊಂಡು ಹೋಗುವುದು ಹೇಗೋ ತಿಳಿಯದೆ, ಸುಮ್ಮನೆ "ಕಿಚಿಕಿಚಿ" ಎಂದು ಒರಲಿಕೊಂಡಿತು.


ಅಷ್ಟರಲ್ಲಿ ಅದರ ಅರಚಾಟವು ದೊಡ್ಡ ಕಪಿಗಳಿಗೆ ಕೇಳಿಸಿತು.
ಕೂಡಲೇ ಹಿಂಡಿಗೆ ಹಿಂಡೇ ತಿಮ್ಮನಿರುವ ಕಡೆ ಓಡಿ ಬಂದವು.
ಅವು ಬರುತ್ತಲೇ ಹುಡುಗರು ಓಡಿಹೋದರು.
ನಾಯಿಯೂ ಓಡಿಹೋಯಿತು.



ಆಗ ಅದಕ್ಕೆ ಬುದ್ಧಿ ಬಂತು. ತಿಮ್ಮನು ಅಂದಿನಿಂದ ಮುಂದೆ ಎಂದೂ ಹಿಂಡನ್ನು ಬಿಟ್ಟು ಹೋಗಲಿಲ್ಲ. ಹಿಂಡಿನಲ್ಲಿ ಯಾರಾದರೂ ತಾಯಿತಂದೆಗಳು ಹೇಳಿದ ಮಾತನ್ನು ಕೇಳದೇ ಹೋದರೆ, ಅವರಿಗೆ ತನ್ನ ಕಥೆಯನ್ನು ಹೇಳಿ ದಾರಿಗೆ ತರುತ್ತಿತ್ತು.*

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ

**ಸಂಪರ್ಕ ಮಾಹಿತಿ**

**ಧ್ವನಿ**

**ಶೈಕ್ಷಣಿಕ ಸಂಪನ್ಮೂಲ ಕೇಂದ್ರ**

**# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ**

**ಶಿವಗಿರಿ, ಧಾರವಾಡ-೫೮೦೦೦೭**

**ಮೊ. ೯೯೮ ೬೬೬ ೧೦೫೫**

**dhwanitrust@gmail.com**

**www.dhwanitrust.org**

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.